**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ ೨೧೪/೨೦೧೨ ಸಿ.ಡಬ್ಲ್ಯೂ –೧೭ ಪಿ.ಡಬ್ಲ್ಯೂ -೦೩

| | | |
|---|---|---|
| ಹೆಸರು | ಃ | ಸಂಗಪ್ಪ |
| ತಂದೆಃಗಂಡ | ಃ | ಯಮನಪ್ಪ ಹುಣಸಿಕಟ್ಟಿ |
| ವಯಸ್ಸು | ಃ | ೬೪ ವರ್ಷ |
| ಉದ್ಯೋಗ | : | ನಿವೃತ್ತ ಡಿ.ವೈ.ಎಸ್.ಪಿ |
| ವಾಸಸ್ಥಳ | ಃ | ಬಿಜಾಪೂರ |

ದಿನಾಂಕಃ೨೭.೧೧.೨೦೨೪

ಸತ್ಯ ಪ್ರತಿಜ್ಞೆಯ ಮೇರೆಗೆ.

---

**ಮುಖ್ಯ ವಿಚಾರಣೆಃ ಸ.ಸ.ಅ.ರವರಿಂದ.**

**ಕಲಂ ೨೯೬ ಸಿ.ಆರ್.ಪಿ.ಸಿ. ಅಡಿಯಲ್ಲಿ ಸಾಕ್ಷಿ ವಿಚಾರಣೆ:**

ನಾನು ೧೮.೦೭.೨೦೦೨ ರಿಂದ ೦೭.೦೭.೨೦೦೩ ರವರೆಗೆ ಆಳಂದ ಪೋಲಿಸ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕೆಲಸ ನಿರ್ವಹಿಸಿರುತ್ತೇನೆ.

ಈ ಪ್ರಕರಣದಲ್ಲಿ ದಿ. ೦೯.೧.೨೦೦೩ ರಂದು ಬೆಳಿಗ್ಗೆ ೭.೪೫ ಗಂಟೆಗೆ ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ-೧ ರವರು ಪಂಚನಾಮೆ, ಜಪ್ತಿಪಡಿಸಿಕೊಂಡ ಮುದ್ದೇಮಾಲುಗಳು ಆರೋಪಿತರೊಂದಿಗೆ ಬಂದು ಲಿಖಿತ ಫಿರ್ಯಾದಿಯನ್ನು ಸಲ್ಲಿಸಿದ ಮೇರೆಗೆ ನಮ್ಮ ಠಾಣಾ ಗುನ್ನಾ ನಂ. ೬/೨೦೦೩ ನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ಫಿರ್ಯಾದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-೬ ಎಂದು ಸಹಿಯನ್ನು ನಿಪಿ ೬-(ಎ) ಎಂದು ಗುರುತಿಸಲಾಯಿತು. ಪ್ರ.ವ.ವ.ದಲ್ಲಿರುವ ತನ್ನ ಸಹಿನ್ನು ನೋಡಿ ಗುರುತಿಸಿದ್ದರಿಂದ ಪ್ರ,.ವ.ವ.ನ್ನು ನಿಪಿ-೭ ಎಂದು ಸಹಿಯನ್ನು ನಿಪಿ-೭(ಎ) ಎಂದು ಗುರುತಿಸಲಾಯಿತು. ಅದೇ ದಿನ ಆರೋಪಿತರ ವಿರುದ್ಧ ದಸ್ತಗೀರ ಕ್ರಮವನ್ನು ಅನುಸರಿಸಿರುತ್ತೇನೆ.

ಅದೇ ದಿನ ತನಿಖೆಯನ್ನು ಮುಂದುವರೆಸಿ ಚಾಸಾ-೩ ರಿಂದ ೧೦ ರವರ ಹೇಳಿಕೆಯನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡೆನು. ಕಾರ್ಯ ನಿರ್ವಾಹಕ ಅಭಿಯಂತರರು ಕ.ವಿ.ಪ್ರ.ನಿ.ನಿ. ಗೆ

ಮತ್ತು ಪುರಸಭೆ ಅಧಿಕಾರಿ ಆಳಂದವರಿಗೆ ಪತ್ರ ಬರೆದು ವಿದ್ಯುತ್ ಸರಬರಾಜನ್ನು ಯಾರ ಹೆಸರಿಗೆ ನೀಡಿದ್ದೀರಾ ಮತ್ತು ಸದರಿ ಜಾಗ ಯಾರ ಹೆಸರಿನಲ್ಲಿದೆ ಎಂದು ತಿಳಿದುಕೊಂಡಿರುತ್ತೇನೆ. ಮುಂದಿನ ತನಿಖೆಗಾಗಿ ಈ ಪ್ರಕರಣದ ಕಡತವನ್ನು ಚಾಸಾ-೧೮ ರವರಿಗೆ ಹಸ್ತಾಂತರಿಸಿರುತ್ತೇನೆ.

**ಮರುವಿಚಾರಣೆ : ಇರುವುದಿಲ್ಲ.**

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.